ಸೆಕ್ರೆಟೇರಿಯೇಟ್ ನಿಂದ-೨, ವಿ. ಐ. ಎಸ್. ಎಲ್.-೨, ಲಾ ಡಿಪಾರ್ಟ್‌ಮೆಂಟಿನಿಂದ-೩, ಸ್ಟೇಟ್ ಅಕೌಂಟ್ಸ್‌ನಿಂದ-೬೪, ಪೋಲೀಸ್ ಡಿಪಾರ್ಟ್‌ಮೆಂಟ್‌ನಿಂದ-೧೨, ಸರ್ವೆ ಅಂಡ್ ಸೆಟಲ್‌ಮೆಂಟ್‌ನಿಂದ ೧೧, ಇಂಜಿನೀಯರಿಂಗ್ ಡಿಪಾರ್ಟ್‌ಮೆಂಟ್‌ನಿಂದ-೧೯೯ ಆದರೆ ಜೂನಿಯರ್ ಇಂಜಿನೀಯರ್ಸ್ ಎಸ್‌ಸಿ ಮತ್ತು ಎಸ್‌ಟಿಯಲ್ಲಿ ಎಷ್ಟು ಮಂದಿ ಬ್ಯಾಕಿರುತ್ತಾರೆಂಬುದರ ಬಗ್ಗೆ ಇನ್‌ಫರ್‌ಮೇಷನ್ ನನ್ನಲ್ಲಿ ಇಲ್ಲ. ಅದನ್ನು ಆ ಮೇಲೆ ತರಿಸಿಕೊಡಕ್ಕೆ ನೆ.

ಶ್ರೀ ಗೋಪಾಲ ಮುಖಿಂದ ಕಾನಡೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಮೂರು ತಿಂಗಳು ೫ ವರ್ಷ ಎಂದು ಹೇಳುತ್ತಾರೆ. ೫ ವರ್ಷಗಳಾದ ನಂತರ ಮೂರು ತಿಂಗಳು ಹೊರಗಡೆ ಹೋಗಿ ಮತ್ತೆ ಬಂದಿರತಕ್ಕಂಥವರು ಎಷ್ಟೋಮಂದಿ ಇರುತ್ತಾರೆ. ಸುಮ್ಮನೆ ಹೆಸರಿಗೆ ಮೂರು ತಿಂಗಳು ಐದು ವರ್ಷ ಎಂದು ಇಟ್ಟಿದ್ದೀರಿ. ಆದರೆ ಬೇರೆ ಕಡೆಯಿಂದ ಬಂದವರು ಬಿ. ಡಿ. ಎ. ನಲ್ಲಿ ಲೂಟಿ ಹೊಡೆಯುತ್ತಿದ್ದಾರೆ. ಎಷ್ಟೋ ಮಂದಿ ಎರವಲು ಸೇವೆಗೆ ಸೇರಿಕೊಂಡವರು ಬೇರೆ ಕಡೆ ಮೂರು ತಿಂಗಳು ಕೆಲಸ ಮಾಡಿ ಮತ್ತೆ ಬಂದು ಸೇರಿಕೊಂಡಿರುತ್ತಾರೆ.

ಶ್ರೀ ಆರ್. ವಿ. ದೇಶಪಾಂಡೆ.—ಈಗಾಗಲೇ ಎರವಲು ಸೇವೆಯಲ್ಲಿ ಐದು ವರ್ಷಗಳ ಕಾಲ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಡೆಪ್ಯುಟೇಷನ್ ಮೇಲೆ ಬಂದವರಿಗೆ ಐದು ವರ್ಷಗಳ ಕಾಲ ಮ್ಯಾಕ್ಸಿಮಮ್ ಇರುತ್ತವೆ. ಆದರೆ ಮೇಲೆ ಇರುವುದಕ್ಕಾಗುವುದಿಲ್ಲ. ಆದರೆ ಕೆಲವು ಸಾರಿ ಸ್ಪೆಸಿಫಿಕ್ ಜಾಬ್‌ಗಳು ಅಂದರೆ ಪಿ. ಆರ್. ಒ, ಅಂಥವರನ್ನು ಹಲವಾರು ಡಿಪಾರ್ಟ್‌ಮೆಂಟ್‌ಗಳಿಂದ ಗೌರ್ನಮೆಂಟ್‌ನ್ನು ರಿಕ್ವೆಸ್ಟ್ ಮಾಡಿಕೊಂಡು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ತಾವು ಹೇಳಿದ ಹಾಗೆ ಜೂನಿಯರ್ ಇಂಜಿನೀಯರ್ಸನ್ನು ಐದು ವರ್ಷಗಳಾದ ಮೇಲೆ ಇಟ್ಟುಕೊಳ್ಳಬಹುದಕ್ಕಾಗುವುದಿಲ್ಲ. ಅವರನ್ನು ಆದಷ್ಟು ಪಟ್ಟಿಗೆ ಕಳುಹಿಸಿಕೊಡಲಾಗುತ್ತದೆ.

Restrictions in drawing the funds to Mandal Panchayats

67. SMT. MANORAMA MADHVARAJ (Udupi).—Will the Minister of Rural Development and Panchayat Raj wakfs be pleased to state ?

a) Whether it has come to the notice of the Government that Mandal Panchayats cannot execute public works continnously because of restrictions in drawing the funds upto Rs. 15,000 as under Account No-1.

b) If so, whether Government will take steps to revise this order and restrict monthly drawal to 10% of total amount allotted for the year ?

SRI M. P. PRAKASH (Minister for Rural Development and Panchayat Raj).—

a) No

b) Does not arise

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ ನಾನು ಕೇಳಿದ ಪ್ರಶ್ನೆ ಏನೆಂದರೆ ಪಂಚಾಯತ್ ನಂಬರ್-೧ ಅಕೌಂಟ್‌ನಲ್ಲಿ ೧೫ ಸಾವಿರ ಖರ್ಚುಮಾಡಬೇಕೆಂದು ರಿಸ್ಟ್ರಿಕ್ಟ್ ಮಾಡಿರುತ್ತೀರಿ. ಈ ಒಂದು ಹಣ ತೆರಿಗೆ ರೀತಿಯಲ್ಲಿ ಬರುವ ಹಣವಾಗಿರುತ್ತದೆ. ತಾವು ಹೇಳುತ್ತೀರಿ ನಿಮ್ಮ ಅಧಿಕಾರ ನಿಮ್ಮ ಕೈಯಲ್ಲಿ ಎಂದು. ಅಧಿಕಾರ ವಿಕೇಂದ್ರೀಕರಣ ಮಾಡಿ ಈ ರೀತಿ ರಿಸ್ಟ್ರಿಕ್ಷನ್ಸ್ ಮಾಡುವುದು ಸರಿಯೇ ?

ಶ್ರೀ ಎಂ.ಪಿ. ಪ್ರಕಾಶ್.—ಈ ವಿಚಾರದ ಬಗ್ಗೆ ಬಹಳ ಬೇಡಿಕೆ ಇದೆ. ಮಧ್ಯಂತರ ಮಂಡಲ್ ಪಂಚಾಯತ್‌ಗಳಲ್ಲಿ ೧೫ ಸಾವಿರ ರೂಪಾಯಿಗಳಿಗೂ ಹೆಚ್ಚು ಹಣ ಅವರ ಸಂಬಳ ಸಾರಿಗೆಯಾಗಿ ನೌಕರರಿಗೆ ಕೊಡಬೇಕಾಗಿದೆ ವರ್ಗ-೧ರಲ್ಲಿ ಬರತಕ್ಕಂಥ ಹಣದಲ್ಲಿ ತೆರಿಗೆ ರೂಪದಲ್ಲಿ ಬರತಕ್ಕಂಥ ಹಣದ ಜೊತೆಗೆ ತಲಾವಾರು ಕೊಡತಕ್ಕಂಥ ಹಣವೂ ಕೂಡ ಸೇರಿರುತ್ತದೆ. ಆದ್ದರಿಂದ ಇದನ್ನು ಒಂದು

ವಾರದೊಳಗಾಗಿ ವರ್ಗ–೧ರಲ್ಲಿ ಇರತಕ್ಕ ಹಣವನ್ನು ಎಷ್ಟಾದರೂ ಖರ್ಚು ಮಾಡುವುದಕ್ಕೆ ಆಜ್ಞೆಯನ್ನು ಹೊರಡಿಸಲಾಗುತ್ತದೆ.

ಶ್ರೀ ಎಂ. ವೀರಪ್ಪ ಪೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆ ಏನೆಂದರೆ ಈಗ ನಾವು ಮಾರ್ಚ್ ೨೨ರಲ್ಲಿದ್ದೇವೆ. ಇತ್ತೀಚೆಗೆ ಜಿಲ್ಲಾಪರಿಷತ್ತು, ಮತ್ತು ಮಂಡಲ ಪಂಚಾಯತಿಗಳಿಗೆ ಒಂದು ಸರ್ಕಾರೀ ಆದೇಶ ಹೋಗಿದೆ. ಅದು ತಮ್ಮ ಇಲಾಖೆಯಿಂದ ಹೋಯಿತೋ ಅಥವಾ ಆರ್ಥಿಕ ಇಲಾಖೆಯಿಂದ ಹೋಯಿತೋ ಗೊತ್ತಿಲ್ಲ, ಆ ಆದೇಶದಲ್ಲಿ ಏನಿದೆಯೆಂದರೆ ಮಾರ್ಚ್ ೩೧ನೇ ತಾರೀಖಿನೊಳಗಾಗಿ ಹಣ ಖರ್ಚು ಮಾಡಬೇಕು. ಇಲ್ಲದಿದ್ದರೆ ಅದು ಲ್ಯಾಪ್ಸ್ ಆಗುತ್ತದೆ ಎಂದಿದೆ. ಹಿಂದೆ ಎರಡು ಮೂರು ತಿಂಗಳು ಹಣ ಕೊಡಬಾರದೆಂದು ಟ್ರೆಜರಿಗೆ ನಿರ್ಬಂಧ ಹಾಕಿದ್ದೀರಿ. ಉಳಿದ ನಾಲ್ಕೈದು ತಿಂಗಳ ಕಾಲ ತಿಂಗಳಿಗೆ ೧೦ ಸಾವಿರ ರೂಪಾಯಿಗಿಂತ ಹೆಚ್ಚು ತೆಗೆದುಕೊಳ್ಳಬಾರದೆಂದು ಮಂಡಲಗಳಿಗೆ ಆದೇಶ ಇತ್ತು. ಇನ್ನು ಎರಡು ಮೂರು ತಿಂಗಳಲ್ಲಿ ೧೫ ಸಾವಿರ ರೂಪಾಯಿಗಳವರೆಗೂ ತೆಗೆದುಕೊಳ್ಳಬಹುದು ಎಂದು ಆದೇಶ ಇತ್ತು. ಜಿಲ್ಲಾ ಪರಿಷತ್ತುಗಳಿಗೆ ತಿಂಗಳಿಗೆ ೨೫ ಲಕ್ಷ ರೂಪಾಯಿ ಗಿಂತ ಹೆಚ್ಚು ಬಿಡುಗಡೆ ಮಾಡಬಾರದು ಎಂದು ಆದೇಶ ಇತ್ತು. ಹೀಗಾಗಿ ಸಂಪೂರ್ಣವಾಗಿ ಅವರ ಕಾರ್ಯಪ್ರಮೆಗಳಿಗೆ ನಿರ್ಬಂಧ ಹಾಕಿರುವುದು ತಮ್ಮ ಗಮನಕ್ಕೆ ಬಂದಿದೆಯೆ ? ಆದ್ದರಿಂದ ಬರುವ ಹಣಕಾಸಿನ ವರ್ಷದಿಂದಲಾದರೂ ಯಾವುದೇ ನಿರ್ಬಂಧ ಹಾಕದಂತೆ ನೋಡಿ. ಮಂಡಲ ಪಂಚಾಯಿತಿ ಗಳಲ್ಲಿ ಅವರದೇ ಆದ ಸಂಪನ್ಮೂಲಗಳಿರುತ್ತವೆ. ಎರಡನೆಯದಾಗಿ ತಾವು ಕೊಡತಕ್ಕ ಅನುದಾನ ಇರುತ್ತದೆ. ನಮ್ಮ ಪ್ರದೇಶದಲ್ಲಿ ೬ ತಿಂಗಳು ಮಳೆ ಬರುವುದರಿಂದ ವರ್ಕಿಂಗ್ ಸೀಸನ್ ಇರುವುದು ಎರಡು ಮೂರು ತಿಂಗಳು ಮಾತ್ರ. ಇಂಥ ಸಂದರ್ಭದಲ್ಲಿ ಈ ರೀತಿ ರಿಸ್ಟ್ರಿಕ್ಷನ್ಸ್ ಹಾಕಿದರೆ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇನ್ನು ಮುಂದಾದರೂ ಈ ರೀತಿ ನಿರ್ಬಂಧ ಹಾಕಬಾರದು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪರಿಷತ್ತಿಗೆ ೨೫ ಲಕ್ಷ ರೂಪಾಯಿ ಖರ್ಚು ಮಾಡಬೇಕೆಂಬ ಆದೇಶ ಇದ್ದರೂ ಈಗ ಒಂದು ಕೋಟಿ ರೂಪಾಯಿಯವರೆಗೆ ಅವಕಾಶ ಕೊಡುತ್ತಿದ್ದೇವೆ. ಅದೇರೀತಿ ೧೫ ಸಾವಿರ ರೂಪಾಯಿಗಿಂತ ಹೆಚ್ಚು ಹಣ ಮಂಡಲಗಳಿಗೆ ಖರ್ಚು ಮಾಡುವ ಅಧಿಕಾರ ಇರಬೇಕು ಮತ್ತು ವರ್ಗ–೧ರಲ್ಲಿ ಆಪರ ಸಂಪನ್ಮೂಲಗಳನ್ನು ಖರ್ಚು ಮಾಡುವುದಕ್ಕೆ ಅಧಿಕಾರ ಇರಬೇಕು ಎಂದು ಈಗ ಸರ್ಕಾರ ಒಪ್ಪಿಗೆ ಕೊಟ್ಟಿದೆ. ಆ ಆಜ್ಞೆ ಇನ್ನು ಒಂದು ವಾರದೊಳಗೆ ಪ್ರಕಟ ವಾಗುತ್ತದೆ. ಆಪರ ಸಂಪನ್ಮೂಲಗಳಲ್ಲಿ ಎಷ್ಟಾದರೂ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಮಾರ್ಚ್ ೩೧ನೇ ತಾರೀಖಿನೊಳಗೆ ಖರ್ಚು ಮಾಡದಿದ್ದರೆ ಲ್ಯಾಪ್ಸ್ ಆಗುವ ಭಯ ಇಲ್ಲ. ವರ್ಗ–೧ರಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಜಿಲ್ಲಾ ಪರಿಷತ್ತಿನ ಹಣ ಕೂಡ ಖರ್ಚು ಮಾಡುವುದಕ್ಕೆ ಅವಕಾಶ ಇದೆ. ಮಾನ್ಯ ಸದಸ್ಯರಿಗೆ ಆ ಆದೇಶದ ಬಗ್ಗೆ ತಪ್ಪು ಮಾಹಿತಿ ಕೊಟ್ಟಿರ ಬಹುದು. ಕಳೆದ ವರ್ಷದಲ್ಲಿ ಖರ್ಚಾಗದೇ ಉಳಿದಿರತಕ್ಕ ಹಣವನ್ನು ಖರ್ಚು ಮಾಡುವಂಥ ಸಂದರ್ಭದಲ್ಲಿ ಅಥವಾ ಮರುಹೊಂದಾಣಿಕೆ ಮಾಡುವಂಥ ಸಂದರ್ಭದಲ್ಲಿ ಸರ್ಕಾರದ ಪೂರ್ವಾನುಮತಿ ಪಡೆದು ಮಾಡ ಬೇಕು ಎಂದು ಆದೇಶ ಹೋಗಿದೆ. ಖರ್ಚಾಗದೇ ಉಳಿದಿರತಕ್ಕ ಹಣವನ್ನು ಖರ್ಚು ಮಾಡುವುದು, ಅಥವಾ ಮರುಹೊಂದಾಣಿಕೆ ಮಾಡುವುದಕ್ಕೆ ಅವಕಾಶ ಇಲ್ಲ ಎಂದು ಆದೇಶ ಹೋಗಿಲ್ಲ. ಅನುಮತಿ ಪಡೆಯಬೇಕು ಎಂದು ಮಾತ್ರ ಹೋಗಿದೆ.

ಬೆಳಗಾಂ ಜಿಲ್ಲೆಯಲ್ಲಿ ಕೊಳವೆ ಬಾವಿಗಳು

೬೮. ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾಂ ಜಿಲ್ಲಾ ಪರಿಷತ್ತಿನಿಂದ ಚಾಲು ಹಂಗಾಮಿಯಲ್ಲಿ ಜಿಲ್ಲೆಯಾದ್ಯಂತ ಕೊಳವೆ ಬಾವಿ ತೋಡಲು ಯಾವ ಕಂಟ್ರಾಕ್ಟರಿಗೆ ವಹಿಸಿ ಕೊಡಲಾಗಿದೆ. (ಅವರ ಹೆಸರುಗಳ ವಿವರ ನೀಡುವುದು).

ಆ) ಜಿಲ್ಲಾ ಪರಿಷತ್ ಅಧಿಕಾರಕ್ಕೆ ಬಂದ ಮೇಲೆ ಜಿಲ್ಲೆಯ ೧೦ ತಾಲ್ಲೂಕುಗಳಲ್ಲಿ ತೋಡಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ?

ಇ) ೧೯೫೮ ಅಕ್ಟೋಬರ್ ನಂತರ ಜಿಲ್ಲೆ ಯಾವ್ಯಾವ ಕೊಳವೆ ಬಾವಿ ತೋಡಲು ಟೆಂಡರ್ ಕರೆಯದೇ ಕಂಟ್ರಾಕ್ಟ್ ವಹಿಸಿ ಕೊಟ್ಟಿದ್ದು ನಿಜವೆ ?